180 Rare b

ಪರಾಮರ್ಶನ ಗ್ರಂಥ

ಅಕ್ಷರ ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ.

ನ. ಪ್ರ. 68
ಅಮ್ಮೆಂಬಳ
2-10-80

ಮದ್ರಾಸು

ಅಳಿಯಸಂತಾನ ಕಾನೂನು

ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ.

0—8—0

090331

340

ಮದ್ರಾಸು ಅಳಿಯಸಂತಾನ ಕಾನೂನು

1949ನೆ ಇಸವಿಯ IXನೆ ಕಾಯಿದೆ.

(ಮದ್ರಾಸು ನ್ಯಾಯವಿಧಾಯಕ ಸಭೆಯ ಈ ಕಾನೂನು ತಾ. 13-4-1949ರಲ್ಲು ಗವರ್ನರ್ ಜನರಲರ ಸಮ್ಮತಿ ಪಡೆದಿದ್ದು ತಾ. 26-4-1949ನೇ ಫೋರ್ಟ್‌ಸೆಂಟ್ ಗಜೆಟಿನಲ್ಲಿ ಪ್ರಕಟವಾಗಿರುತ್ತದೆ.)

ಅಳಿಯಸಂತಾನ ಕಟ್ಟನ್ನಾಚರಿಸುವ ಜನರಿಗೆ ಸಂಬಂಧಿಸಿದ ವಿವಾಹ, ಅಶನಾರ್ಥ ರಕ್ಷಣೆ, ಮರಣ ಶಾಸನರಹಿತ ಮೃತನ ವಾರಿಸ್ದಾರಿಕೆ, ಕುಟುಂಬ ದಾಡಳಿತೆ ಮತ್ತು ವಿಭಾಗಗಳ ಕುರಿತು ಇರುವ ಕಾನೂನನ್ನು ಕೆಲಮಟ್ಟಿಗೆ ಸ್ಪಷ್ಟೀಕರಿಸುವದು ಮತ್ತು ತಿದ್ದುಪಡಿ ಮಾಡುವದು ಆವಶ್ಯವಿರುವದರಿಂದ ಈ ಕೆಳಗೆ ನಮೂದಿಸಿದ ಪ್ರಕಾರ ವಿಧಿಸಲಾಗಿದೆ.

ಪರಿಚ್ಛೇದ I
ಪ್ರಸ್ತಾವನೆ

1 [1] ಈ ಕಾಯಿದೆಯು 1949ನೇ ಇಸವಿಯ ಮದ್ರಾಸು ಅಳಿಯ ಸಂತಾನ ಕಾನೂನೆಂದು ಕರೆಯಲ್ಪಡುವುದು.

[2] ಇದು

[a] ಅಳಿಯಕಟ್ಟನ್ನಾಚರಿಸುವ ಎಲ್ಲಾ ಹಿಂದುಗಳಿಗೆ ಮತ್ತು ಜೈನರಿಗೆ; ಮತ್ತು

[b] ಸದ್ರಿ ಕಟ್ಟನ್ನಾಚರಿಸುವ ಹಿಂದು ಮತ್ತು ಜೈನ ಹೆಂಗಸರನ್ನು ವಿವಾಹವಾಗಲು ಕಂಟ್ರಾಕ್ಟ ಮಾಡಿಕೊಂಡಿರುವ ಯಾ ಕಂಟ್ರಾಕ್ಟ ಮಾಡಲಿಕ್ಕಿರುವ ಸದ್ರಿ ಕಟ್ಟನ್ನಾಚರಿಸುವ ಯಾ ಇತರ ಕಟ್ಟಗೊಳಪಟ್ಟ ಎಲ್ಲಾ ಹಿಂದು ಮತ್ತು ಜೈನ ಗಂಡಸಿರಿಗೆ ಅನ್ವಯಿಸುತ್ತದೆ. ಆದರೆ IVನೆ ಪರಿಚ್ಛೇದದ ಪ್ರಕರಣಗಳು ಜೈನರಿಗೆ ಅನ್ವಯಿಸಲಾರವು.

[3] ಈ ಕಾನೂನು ಕೂಡಲೇ ಜ್ಯಾರಿಗೆ ಬರತಕ್ಕದು.

2 1896ನೇ ಇಸವಿಯ ಮಲಬಾರ್ ವಿವಾಹ ಕಾನೂನಿನಲ್ಲಿ ಈ ವರೆಗೆ ರದ್ದಾಗದೆ ಇರುವ ಅಂಶವನ್ನು ಮತ್ತು 1928ನೆ ಜೈನ ವಾರೀಸು ಹಕ್ಕು ಕಾನೂನಿನ 6ನೇ ಸೆಕ್ಷನ್ ಈ ಮೂಲಕ ರದ್ದುಮಾಡಲ್ಪಟ್ಟದೆ.

3 [1] ಈ ಕಾನೂನಿನಲ್ಲಿ ವಿಷಯ ಅಥವಾ ಸಂದರ್ಭದಲ್ಲಿ ಏನಾದರೂ ಪ್ರತಿಕೂಲ ಇಲ್ಲದೆ ಇರುವಲ್ಲಿ

[a] "ಅಳಿಯಸಂತಾನ"ವೆಂದರೆ ಸ್ತ್ರೀ ಸಂತತಿ ಪರಂಪರೆಯಾಗಿದೆ; ಆದರೆ ಮರುಮಕತ್ತಾಯಮ್ ಎಂದು ಕರೆಯಲ್ಪಡುವ ಸಂತತಿ ಪರಂಪರೆಯ ಪದ್ಧತಿಯು ಇದರಲ್ಲಿ ಒಳಗೊಂಡಿರುವುದಿಲ್ಲ.

[b] [i] "ಕವರು" ಎಂದರೆ ಸ್ತ್ರೀ ಸಂಬಂಧವಾಗಿ ಉಪಯೋಗಿಸಲ್ಪಟ್ಟಲ್ಲಿ ಸದರಿ ಸ್ತ್ರೀ, ಅವಳ ಮಕ್ಕಳು ಮತ್ತು ಸ್ತ್ರೀ ಪರಂಪರೆಯಾಗಿ ಅವಳ ಎಲ್ಲಾ ಸಂತತಿಯಿಂದ ಕೂಡಿದ ಸಮೂಹ ಎಂದು ಅರ್ಥ.

[ii] "ಕವರು" ಎಂದು ಪುರುಷ ಸಂಬಂಧವಾಗಿ ಉಪಯೋಗಿಸಲ್ಪಟ್ಟಲ್ಲಿ ಆ ಗಂಡಸಿನ ತಾಯಿಯ ಕವರು ಎಂದು ಅರ್ಥ.

[c] "ಕುಟುಂಬ" ವೆಂದರೆ ಅಳಿಯ ಸಂತಾನ ಕಾನೂನಿನ ಮೇರೆಗೆ ಆಸ್ತಿಯಲ್ಲಿ ಸಮಷ್ಟಿ ಹಕ್ಕಿರುವ ಅವಿಭಕ್ತ ಕುಟುಂಬಕ್ಕೆ ಸೇರಿದ ವ್ಯಕ್ತಿಗಳ ಸಮೂಹ.

[d] "ಪ್ರಾಯಸ್ಥ" ಎಂದರೆ 18 ವರುಷ ಪ್ರಾಯ ಪೂರ್ತಿಯಾಗಿರುವ ವ್ಯಕ್ತಿ.

[e] "ಅಪ್ರಾಯಸ್ಥ" ಎಂದರೆ 18 ವರುಷ ಪೂರ್ತಿಯಾಗದ ವ್ಯಕ್ತಿ.

[f] "ನಿಸ್ಸಂತತಿ ಕವರು" ಎಂದರೆ ಸಂತಾನ ಇಲ್ಲದ ಕವರು.

[g] "ವಿಧಿಸಲ್ಪಟ್ಟದು" ಎಂದರೆ ಈ ಕಾನೂನಿನ ಮೇರೆ ತಯಾರಿಸಿದ ರೂಲುಗಳ ಮೂಲಕ ವಿಧಿಸಲ್ಪಟ್ಟದು.

[h] "ಸಂತತಿ ಕವರು" ಎಂದರೆ 50 ವರುಷಕ್ಕೆ ಮೀರ ಪ್ರಾಯವಿರುವ ಒಂದೇ ಒಂದು ಹೆಂಗಸಾದರೂ ಇರುವ ಕವರು.

[i] "ಯಜಮಾನ" ಎಂದರೆ ಕುಟುಂಬದ ಯಾ ಕವರಿ

ಹೆಣ್ಣು ಯಾ ಗಂಡು ಮೆಂಬರರಲ್ಲಿ ಅತಿ ಹಿರಿಯನಾಗಿದ್ದು ಆ ಕುಟುಂಬದ ಆಸ್ತಿಗಳ ಆಡಳಿತೆ ಹಕ್ಕು ಯಾರಲ್ಲಿ ಸ್ಥಾಪಿತವಾಗಿರುವದೋ ಅಂಥ ಮೆಂಬರನೆಂತಲೂ ಅಥವಾ ಅಂಥ ಹಕ್ಕು ಆ ಕುಟುಂಬದ ಪದ್ಧತಿ ಮೇರೆಗೆ ಯಾ ಕರಾರು ಮೂಲಕ, ಕೋರ್ಟು ಡಿಕ್ರಿ ಮೂಲಕ ಯಾ ಇನ್ನಿತರ ರೂಪದಲ್ಲಿ ಬೇರೆ ಮೆಂಬರ ಯಾ ಮೆಂಬರರಲ್ಲಿ ಸ್ಥಾಪಿತವಾಗಿದ್ದರೆ ಅಂಥ ಮೆಂಬರ ಯಾ ಮೆಂಬರರು ಎಂದು ತಿಳಿದುಕೊಳ್ಳುವದು.

ಪರಿಚ್ಛೇದ II

ವಿವಾಹ ಮತ್ತು ಅದರ ಬಿಡುಗಡೆ

4 [1] 5ನೆ ಪ್ರಕರಣದಲ್ಲಿ ನಮೂದಿಸಿದಂತೆ ವಿನಹ ಓರ್ವ ಅಳಿಯ ಸಂತಾನ ಸ್ತ್ರೀಯು–

[i] ತನ್ನ ಜಾತಿಯ ಓರ್ವ ಪುರುಷನೊಂದಿಗೆ, ಅಥವಾ

[ii] ತನ್ನ ಜಾತಿಯಲ್ಲದ ಮತ್ತು ಅಳಿಯಕಟ್ಟನ್ನಾಚರಿಸುವ ಅಥವಾ ಆಚರಿಸದ ಹಿಂದೂ ಅಥವಾ ಜೈನನೊಂದಿಗೆ ಮಾಡಿಕೊಳ್ಳುವ ದಾಂಪತ್ಯ ಸಂಬಂಧವು ಎಲ್ಲಾ ಉದ್ದೇಶಗಳಿಗೂ ಕಾನೂನು ಪ್ರಕಾರ ಸಿಂಧಾಗಿರುವ ಮದುವೆಯೆಂದು ಪರಿಗಣಿಸಲ್ಪಡತಕ್ಕದು, ಆದರೆ

[a] ವಿವಾಹವಾಗತಕ್ಕ ಉಭಯತರು ತಮ್ಮ ಸಮಾಜದ ಪದ್ಧತಿ ಅಥವಾ ಸಂಪ್ರದಾಯವು ನಿಷೇಧಿಸುವ ತರದ ಸಮೀಪದ ಬಂಧುತ್ವ ಉಳ್ಳವರಾಗಲಿ ರಕ್ತ ಸಂಬಂಧವುಳ್ಳವರಾಗಲಿ ಇರಕೂಡದು; ಮತ್ತು

[b] ಅಂಥ ಸಂಬಂಧವು–

[i] ಈ ಕಾನೂನು ಜ್ಯಾರಿಗೆ ಬರುವ ತಾರೀಕಿನ ಮೊದಲು ಉಭಯತರನ್ನೂ ಒಳಕೊಂಡ ಸಮಾಜದಲ್ಲಿ ರೂಢಿಯಲ್ಲಿರುವ ಸಂಪ್ರದಾಯಗಳಿಗನುಸರಿಸಿ ಬಹಿರಂಗವಾಗಿ ನಡೆದಿರುವ ವಿವಾಹವು ಅಥವಾ ಆ ಸಮಾಜವು ಕಾನೂನು ಪ್ರಕಾರದ ವಿವಾಹವೆಂದು ಮನ್ನಿಸ ತಕ್ಕಂಥದ್ದಾಗಿರಬೇಕು; ಅಥವಾ

[ii] ಮೇಲೆ ನಮೂದಿಸಿರುವ ತಾರೀಕಿನಲ್ಲಿ, ವ ನಂತರ ಉಭಯತರ ಪೈಕಿ ಒಬ್ಬ ಯಾ ಇಬ್ಬರೂ ಅಪ್ರಾಯಸ್ಥರಾಗಿದ್ದಲ್ಲಿ ಅಂಥ

ಮೈನರನ ಯಾ ಮೈನರರ ರಕ್ಷಕ ಯಾ ರಕ್ಷಕರ ಸಮ್ಮತದಿಂದ ಬಹಿರಂಗ ವಾಗಿ ನಡದ್ದಾಗಿರಬೇಕು; ಅಥವಾ

[iii] ಮೇಲೆ ನಮೂದಿಸಿರುವ ತಾರೀಕಿನ ಮೊದಲು 1896ನೇ ಮಲಬಾರ್ ವಿವಾಹ ಕಾನೂನು ಮೇರೆಗೆ ರಿಜಿಸ್ಟ್ರಿಯಾದ ಮದುವೆಯಾಗಿರಬೇಕು.

[2] ಉಪಪ್ರಕರಣ [1] ರ ಪ್ರಕಾರ ಬೇರೆ ಎಲ್ಲಾ ವಿದ್ಯಮಾನ ಗಳಿಂದ ಕಾನೂನು ಪ್ರಕಾರ ಸಿಂಧುವಾಗುವ ಅಪ್ರಾಯಸ್ಥರೊಳಗಣ ಅಥವಾ ಪ್ರಾಯಸ್ಥ ಮತ್ತು ಅಪ್ರಾಯಸ್ಥರೊಳಗಣ ವಿವಾಹವು ಅಂಥ ಮೈನರರ ರಕ್ಷಕ ಯಾ ರಕ್ಷಕರ ಅನುಮತಿ ಪಡೆಯದೇನೇ ನಡದ್ದೆಂಬ ಕಾರಣದಿಂದ ಮಾತ್ರ ಅಸಿಂಧುವಾಗಲಾರದು.

[3] ಈ ಕಾನೂನು ಜ್ಯಾರಿಗೆ ಬರುವ ತಾರೀಕಿನಲ್ಲಿ ಅಥವಾ ಅನಂತರ ಪ್ರತಿಯೊಂದು ಮದುವೆಯ್ನಾದುದರ ಕುರಿತು ವಿಧಿಸಲ್ಪಡ ಬಹುದಾದ ರೀತಿಯಲ್ಲಿ ಅಂಥಾ ಜನರು ಸಂಬಂಧಪಟ್ಟ ಅಧಿಕಾರಿಗಳಿಗೆ ವಿಧಿಸಿದ ಅವಧಿಯೊಳಗೆ ತಕ್ಕ ಕ್ರಮದಲ್ಲಿ ತಿಳಿಸತಕ್ಕದ್ದು. ಹಾಗೆ ಜ್ಯಾಹೀರು ಮಾಡಲು ತಪ್ಪಿದ್ದಲ್ಲಿ 50 ರೂಪ್ಯಾ ವರೆಗಿನ ಜುಲ್ಮಾನೆಯ ಶಿಕ್ಷೆಗೆ ಗುರಿಯಾಗುವರು. ಆದರೆ ಅಂತಹ ತಪ್ಪಿಗಾಗಿ ವಿವಾಹವು ಅಸಿಂಧುವಾಗದು; ಅಥವಾ ಉಭಯತರ, ವ ಅವರ ಮಕ್ಕಳ ಹಕ್ಕು ಬಾಧ್ಯತೆಗಳಿಗೆ ಬಾಧಕ ಬರಲಾರದು.

5 ಉಪ ಪ್ರಕರಣ 4ರ ಮೇರೆಗೆ ಸಿಂಧುವಾಗಿರತಕ್ಕ ಮದುವೆಯೊಂದು ಮೊದಲೇ ಆಗಿ ಅದು ಜ್ಯಾರಿ ಇರುವಲ್ಲಿ ಗಂಡನಾಗಲಿ ಹೆಂಡತಿಯಾಗಲಿ ಈ ಕಾನೂನು ಜ್ಯಾರಿಗೆ ಬರುವ ತಾರೀಕಿನಲ್ಲಿ ವ ಅನಂತರ ಇನ್ನೊಂದು ಮದುವೆ ಮಾಡಿಕೊಂಡಲ್ಲಿ ಅಂಥಾ ಮದುವೆಯು ಅಸಿಂಧುವಾಗಿರ ತಕ್ಕುದು.

6 ಪ್ರಕರಣ 4ರ ಮೇರೆಗೆ ಸಿಂಧುವಾದ ಮದುವೆಯನ್ನು ಈ ಕಾನೂನು ಜ್ಯಾರಿಗೆ ಬರುವ ತಾರೀಕಿನಲ್ಲಿ, ವ ಅನಂತರ ಈ ಕೆಳಗೆ ನಮೂದಿಸಿರುವ ರೀತಿಯಲ್ಲಿ ರದ್ದು ಮಾಡಬಹುದು–

[a] ಸಂಬಂಧಪಟ್ಟ ದಂಪತಿಗಳು ರಿಜಿಸ್ತ್ರಿ ದಾಖಲೆ ಮೂಲಕ ರದ್ದು ಮಾಡಿಕೊಳ್ಳಬಹುದು; ಅಥವಾ

[b] ಈ ಕೆಳಗೆ ನಮೂದಿಸಿರುವಂತೆ ಕೋರ್ಟಿನ ಹುಕುಮು ಮೇರೆಗೆ ರದ್ದು ಮಾಡಿಕೊಳ್ಳಬಹುದು—

ಆದರೆ ಗಂಡ ಹೆಂಡಿರಿಬ್ಬರೂ ಅಥವಾ ಅವರಲ್ಲಿ ಒಬ್ಬ ಅಪ್ರಾಯಸ್ಥರಿದ್ದ ಪಕ್ಷದಲ್ಲಿ ಅಂಥಾ ಗಂಡ ಹೆಂಡಿರಿಬ್ಬರೂ ಯಾ ಅವರೊಳಗೆ ಮೈನರ್ ಆಗಿರುವ ವ್ಯಕ್ತಿಯು ಪ್ರಾಯಸ್ಥನಾಗುವ ವರೆಗೆ ಅವರೊಳಗಾದ ಮದುವೆಯು ರದ್ದಾಗತಕ್ಕದ್ದಲ್ಲ.

ಈ ಕಾನೂನು ಜ್ಯಾರಿಗೆ ಬರುವ ಮೊದಲು ದಂಪತಿಗಳು ತಮ್ಮ ಸಮಾಜದ ಪದ್ಧತಿಗನುಸಾರವಾಗಿ ಬಿಡುಗಡೆ ಮಾಡಿಕೊಂಡಿದ್ದ ಮದುವೆಯನ್ನು ಈ ಪ್ರಕರಣದ ಯಾವ ವಿಷಯವೂ ಅಸಿಂಧುಗೊಳಿಸಲಾರದು.

7 ಪ್ರಕರಣ 4ರ ಮೇರೆಗೆ ಸಿಂಧುವಾಗಿರುವ ಮದುವೆಯು ಮರಣ ಯಾ ಇನ್ನಿತರ ಕಾರಣಗಳಿಂದ ಮತ್ತು ಈ ಕಾನೂನು ಜ್ಯಾರಿಗೆ ಬರುವ ಮೊದಲು ವ ನಂತರ ಬಿಡುಗಡೆಯಾದರೆ ಅಂಥಾ ಮದುವೆಯಿಂದ ಜನಿಸಿದ ಮಕ್ಕಳ ಅಥವಾ ಅವರ ಸಂತತಿಯವರ ಹಕ್ಕುಭಾಧ್ಯತೆಗಳನ್ನು ಬಾಧಿಸಲಿಕ್ಕಿಲ್ಲ.

8 [1] ಓರ್ವ ಗಂಡ ಯಾ ಹೆಂಡತಿಯು ಮದುವೆಯ ಬಿಡುಗಡೆಗೆ [ಕೋರ್ಟಿ]ಗೆ ಅರ್ಜಿ ಹಾಕಬಹುದು—

[a] ಅಂಥ ಸ್ಥಳವು—

[i] ಮದುವೆಯು ಆದ ಸ್ಥಳವಾಗಿರಬೇಕು, ಅಥವಾ

[ii] ಮದುವೆಯ ಕಾಲದಲ್ಲಿ ಎದ್ರಿ ಅಥವಾ ಅರ್ಜಿದಾರನಿಗೆ ಕಾಯಂ ವಾಸ್ತವ್ಯವಿರತಕ್ಕದ್ದು; ಅಥವಾ ನಿಜವಾಗಿ ಮತ್ತು ಸ್ವೇಚ್ಛೆಯಿಂದ ವಾಸ್ತವಿಸಿರಬೇಕು; ಅಥವಾ ವ್ಯಾಪಾರ ವಹಿವಾಟ ನಡೆಸಿರಬೇಕು; ಇಲ್ಲವೆ ಸ್ವಂತ ಲಾಭಕ್ಕಾಗಿ ದುಡಿದ ಸ್ಥಳವಾಗಿರಬೇಕು, ಅಥವಾ

[iii] ಅರ್ಜಿ ಹಾಕುವ ಸಮಯದಲ್ಲಿ ಎದ್ರಿ ಯಾ ಅರ್ಜಿದಾರನಿಗೆ ಕಾಯಂ ವಾಸ್ತವ್ಯವಿದ್ದಿರಬೇಕು, ಇಲ್ಲವೆ ನಿಜವಾಗಿ ಮತ್ತು

ಸ್ವೇಚ್ಛೆಯಿಂದ ವಾಸ್ತವಿಸುತ್ತಿರಬೇಕು; ಇಲ್ಲವೆ ವ್ಯಾಪಾರ ವಹಿವಾಟ ನಡೆಸುತ್ತಿರಬೇಕು ಅಥವಾ ಸ್ವಂತ ಲಾಭಕ್ಕೆ ದುಡಿಯುತ್ತಿರಬೇಕು.

ಆ ಸ್ಥಳವು ಯಾವ ಡಿಸ್ಟ್ರಿಕ್ಟ್ ಮುನ್ಸಿಪ್ ಕೋರ್ಟಿನ ಚಕ್ಕ್ಬಂದಿಯೊಳಗಿರುವದೋ ಆ ಕೋರ್ಟಿನಲ್ಲಿ ಅರ್ಜಿ ಹಾಕಬೇಕು.

[b] ಅಂತಹ ಸ್ಥಳವು ಯಾವುದಾದರೊಂದು ಡಿಸ್ಟ್ರಿಕ್ಟ್ ಮುನ್ಸಿಪ್ ಕೋರ್ಟಿನ ಚಕ್ಕು ಬಂದಿಯೊಳಗೆ ಇರದಿರುವಲ್ಲಿ ಸಬ್ ಜಡ್ಜರ ಕೋರ್ಟಿನಲ್ಲಿ ಮಾಡತಕ್ಕದ್ದು ಅಥವಾ ಅಂತಹ ಕೋರ್ಟು ಇಲ್ಲದೆ ಹೋದರೆ ಸದ್ರಿ ಸ್ಥಳವು ಯಾವ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನ ಸುಪರ್ದೆಯೊಳಗಿರುತ್ತದೋ ಆ ಕೋರ್ಟಿನಲ್ಲಿ ಅರ್ಜಿ ಮಾಡಬಹುದು; ಮತ್ತು

[c] ಅಂತಹ ಸ್ಥಳವು ಮದ್ರಾಸ್ ಹೈಕೋರ್ಟಿನ ಸುಪರ್ದೆಯೊಳಗಿದ್ದರೆ ಮದ್ರಾಸ್ ಸಿಟಿ ಸಿವಿಲ್ ಕೋರ್ಟಿನಲ್ಲಿ ಅರ್ಜಿ ಮಾಡಬಹುದು.

[2] ಅಂತಹ ಅರ್ಜಿಯಲ್ಲಿ ಮದುವೆಯು ನಡೆದಿರುವ ಸ್ಥಳ ಮತ್ತು ತಾರೀಕನ್ನು ಕಾಣಿಸಬೇಕು, ಮತ್ತು ಮದುವೆಕಾಲದಲ್ಲಿ ಎದ್ರಿಯು ಅಪ್ರಾಯಸ್ಥನಾಗಿದ್ದರೆ ಯಾವ ರಕ್ಷಕನ ಒಪ್ಪಿಗೆಯಿಂದ ಆ ಮದುವೆ ನಡೆದಿರುವುದೋ ಅಂತಹ ರಕ್ಷಕನಿದ್ದರೆ ಅವನ ಹೆಸರು ಮತ್ತು ವಿಳಾಸ ಕಾಣಿಸಬೇಕು.

9 ಅಂತಹ ಅರ್ಜಿಯ ನಕಲೊಂದನ್ನು ಅರ್ಜಿದಾರನ ಖರ್ಚಿನಿಂದ ಎದ್ರಿಗೆ ಜ್ಯಾರಿಮಾಡತಕ್ಕದ್ದು.

10 [1] ಮೇಲೆ ಹೇಳಿದಂತೆ ಸದ್ರಿ ಅರ್ಜಿಯ ನಕಲಿನ ನೋಟೀಸು ಜ್ಯಾರಿಯಾದ 6 ತಿಂಗಳ ಮೇಲೆ ಮತ್ತು ಒಂದು ವರುಷದೊಳಗೆ ಸದ್ರಿ ಅರ್ಜಿಯು ಹಿಂದೆ ತೆಗೆಯಲ್ಪಡದೆ ಇದ್ದು ಅರ್ಜಿದಾರನ ಮನವಿಯ ಮೇರೆಗೆ ಕೋರ್ಟು ತಕ್ಕ ತನ್ಕಿ ನಡೆಸಿ ಸಮಾಧಾನಪಟ್ಟಲ್ಲಿ ಯುಕ್ತ ಕಂಡಂತೆ 4ನೇ ಪ್ರಕರಣದ ಮೇರೆಗೆ ಸಿಂಧುವಾದ ಮದುವೆಯನ್ನು ಬರಹನಿಶಿ ಹುಕುಮು ಮೂಲಕ ರದ್ದುಪಡಿಸತಕ್ಕದ್ದು.

[2] ಅಂತಹ ಹುಕುಮಿನ ತಾರೀಕಿನಿಂದ ಆ ಮದುವೆಯು ರದ್ದಾಗುವುದು.

11 ಈ ಪರಿಚ್ಛೇದದ ಮೇರೆಗೆ ಮಾಡುವ ಅರ್ಜಿಗಳಿಗೆ ಸಾಧ್ಯವಾದ ಮಟ್ಟಿಗೆ 1908ರ ಸಿವಿಲ್ ಪ್ರೊಸೀಜರ್ ಕೋಡಿನ ಪ್ರಕರಣಗಳು ಅನ್ವಯಿಸತಕ್ಕದ್ದು.

12 ಪ್ರಕರಣ 4ರ ಮೇರೆಗೆ ಸಿಂಧುವಾದ ಮದುವೆಯ ದಾಂಪತ್ಯ ಹಕ್ಕು ಸ್ಥಾಪನಾರ್ಥವಾಗಿ ಯಾವ ಕೋರ್ಟಿಗೂ ದಾವೆ ದಾಖಲು ಮಾಡಿಕೊಳ್ಳುವ ಅಧಿಕಾರವಿರುವುದಿಲ್ಲ.

ಪರಿಚ್ಛೇದ III

ಅಶನಾರ್ಥ ಮತ್ತು ರಕ್ಷಣೆ

13 [1] ವಿವಾಹಿತ ಹೆಮ್ಮಕ್ಕಳ ಹೊರತು ಹೆಂಡತಿ ಮತ್ತು ಅಪ್ರಾಯಸ್ಥ ಮಕ್ಕಳು ಸಂದರ್ಭಕ್ಕನುಸರಿಸಿ ಗಂಡ ಅಥವಾ ತಂದೆಯ ಪೋಷಣೆಗೆ ಹಕ್ಕುದಾರರಾಗಿರುವರು.

ಆದರೆ ನ್ಯಾಯವಾದ ಕಾರಣವಿಲ್ಲದೆ ಗಂಡನೊಡನೆ ಜೀವಿಸಿ ಬರಲು ನಿರಾಕರಿಸುವ ಹೆಂಡತಿಗೆ ಗಂಡನಿಂದ ಪೋಷಣೆ ಪಡೆಯಲು ಹಕ್ಕಿರಲಾರದು.

[2] ಉಪಪ್ರಕರಣ [1] ರಲ್ಲಿ ನಮೂದಿಸಿದ ಯಾವ ವಿಷಯವಾದರೂ ಒಬ್ಬ ವ್ಯಕ್ತಿಗೆ ಅವನ ಅಥವಾ ಅವಳ ಕುಟುಂಬದ ಯಾಕವರಿನ ಆಸ್ತಿಗಳಿಂದ ಪೋಷಣೆ ಪಡೆಯಲು ಬಾಧಕವಾಗದು.

[3] ಉಪಪ್ರಕರಣ [1] ರ ಮೇರೆಗೆ ಕೋರ್ಟು ಅಶನಾರ್ಥ ಕೊಡಿಸುವಾಗ ಅಶನಾರ್ಥ ಕೊಡುವವನ ಸ್ಥಿತಿಗತಿ ಮತ್ತು ಅನುಕೂಲತೆಗಳನ್ನೂ ಅಶನಾರ್ಥ ಕೇಳುವವನ ನ್ಯಾಯವಾದ ಬೇಡಿಕೆಗಳನ್ನೂ ಪರಿಶೀಲಿಸಿ ನಿಶ್ಚಯಿಸತಕ್ಕದ್ದು.

14 ಗಂಡನು ತನ್ನ ಮೈನರ ಹೆಂಡತಿಯ ದೇಹ ಮತ್ತು ಆಸ್ತಿಗಳ ರಕ್ಷಕನಾಗಿರತಕ್ಕದ್ದು; ಮತ್ತು ಪ್ರಕರಣ 15ಕ್ಕೊಳಪಟ್ಟು ತಂದೆಯು ಮದುವೆಯಾದ ಹೆಣ್ಣು ಮಕ್ಕಳ ಹೊರತು ಉಳಿದ ಮೈನರ್ ಮಕ್ಕಳ ದೇಹದ ವ ಆಸ್ತಿಯ ರಕ್ಷಕನಾಗಿರತಕ್ಕದ್ದು:

ಆದರೆ ರಕ್ಷಕತ್ವವು ಹೆಂಡತಿಯು ಅಥವಾ ಮಕ್ಕಳ ಕುಟುಂಬ ಯಾ ಕವರಿನ ಆಸ್ತಿ ಹಕ್ಕು ಭಾಧ್ಯತೆಗಳಿಗೆ ಅನ್ವಯಿಸಲಾರದು;

ಆದರೆ 3 ವರ್ಷ ಪೂರ್ತಿಯಾಗದ ಮೈನರ್ ಮಗುವಿನ ಸ್ವಾಧೀನತೆಯು ಸರ್ವಸಾಮಾನ್ಯವಾಗಿ ತಾಯಿಯಲ್ಲಿಯೇ ಇರತಕ್ಕದ್ದು.

15 ತಂದೆಯು ಮೃತನಾಗಿದ್ದರೆ ಅಥವಾ ಅವನೊಡನೆ ಅವಳ ಮದುವೆ ಸಂಬಂಧವು ಬಿಡುಗಡೆಯಾಗಿದ್ದರೆ ತಾಯಿಯು ಅವಳ ಮೈನರ್ ಮಕ್ಕಳ ದೇಹ ಮತ್ತು ಆಸ್ತಿಯ ರಕ್ಷಕಳಾಗಿರತಕ್ಕದ್ದು.

16 1890ರ ಗಾರ್ಡಿಯನ್ ಎಂಡ್ ವಾರ್ಡ್ಸ್ ಆಕ್ಟಿನ ಪ್ರಕರಣಗಳು ಜ್ಯಾರಿಯಾಗುವರೆ, 14 ಮತ್ತು 15ನೇ ಪ್ರಕರಣದ ಯಾವ ವಿಷಯಗಳೂ ಪ್ರತಿಬಂಧಿಸಲಾರವು.

ಪರಿಚ್ಛೇದ IV

ಮರಣ ಶಾಸನರಹಿತ ವಾರಿಸ್ದಾರಿಕೆ

17 ಒಬ್ಬ ವ್ಯಕ್ತಿಯು ಜ್ಯಾರಿಗೆ ಬರುವ ತರದ ಮರಣ ಶಾಸನ ಮಾಡದೆ ಮೃತನಾದಲ್ಲಿ ಅಂತಹ ಎಲ್ಲಾ ಆಸ್ತಿಗಳ ಮಟ್ಟಿಗೆ ಮರಣ ಶಾಸನರಹಿತ ಮೃತನೆಂದು ಪರಿಗಣಿಸಲ್ಪಡತಕ್ಕದ್ದು.

18 ಅಳಿಯ ಸಂತಾನದ ಗಂಡಸೊಬ್ಬನು, ಮರಣ ಶಾಸನವಿಲ್ಲದೆ ಮೃತನಾದರೆ ಅವನ ಸ್ವಾರ್ಜಿತ ಅಥವಾ ಸ್ವಂತ ಆಸ್ತಿಯು ಪ್ರಕರಣ 19, 20, 21, 22, 23 ಮತ್ತು 24ರ ಮೇರೆಗೆ ಕ್ರಮವಾಗಿ ಮತ್ತು ಅವುಗಳ ನಿಯಮಕ್ಕನುಸಾರವಾಗಿ ಹೋಗತಕ್ಕುದು.

19 [1] ಮರಣ ಶಾಸನರಹಿತ ಮೃತನಿಗೆ ಸಂತತಿ ಯಾ ಸಂತತಿಯವರು ಯಾರಾದರೂ ಇದ್ದು ಮತ್ತು ಆತನ ತಾಯಿ ಸಹ, ಅಥವಾ ಅವನ ವಿಧವೆ, ಯಾ ವಿಧವೆಯರು ಅಥವಾ ಅವನ ತಾಯಿ ಮತ್ತು ಅವನ ವಿಧವೆ ಯಾ ವಿಧವೆಯರು ಅವರಿಬ್ಬರೂ ಜೀವಂತರಾಗಿರುವಲ್ಲಿ ಅವನ ಸರ್ವಾದಿ ಆಸ್ತಿಯು ಅವರೆಲ್ಲರಿಗೂ ಸೇರುವದು.

[2] ತಾಯಿ ಮತ್ತು ವಿಧವೆಯರು ಯಾರೂ ಇಲ್ಲದಿರುವಲ್ಲಿ ಸರ್ವಾದಿ ಆಸ್ತಿ ಆತನ ಸಂತತಿ ಅಥವಾ ಸಂತತಿಯವರಿಗೆ ಸೇರತಕ್ಕದ್ದು.

20 ಪ್ರಕರಣ 19ರಲ್ಲಿ ನಮೂದಿಸಿದ ವಾರೀಸ್ದಾರರೊಳಗೆ ಈ ಕೆಳಗೆ ವಿವರಿಸಿದ ನಿಯಮಗಳಂತೆ ಆಸ್ತಿ ವಿಭಾಗಿಸಲ್ಪಡತಕ್ಕದ್ದು.

[i] ಒಬ್ಬಳು ಯಾ ಒಬ್ಬಳಿಗಿಂತ ಹೆಚ್ಚು ವಿಧವೆಯರಿದ್ದಲ್ಲಿ ಪ್ರತಿಯೊಬ್ಬ ವಿಧವೆಗೆ ಮಗುವಿನಷ್ಟೇ ಪಾಲಿನ ಹಕ್ಕಿರತಕ್ಕದ್ದು.

[ii] ತಾಯಿಗೆ ಮಗುವಿನಷ್ಟೇ ಪಾಲು ಪಡೆಯಲು ಹಕ್ಕಿರತಕ್ಕದ್ದು.

[iii] [a] ಪ್ರತಿಯೊಂದು ಮಗುವಿಗೆ [ಮಗನಾಗಲಿ ಮಗಳಾಗಲಿ] ಸಮಾನವಾದ ಪಾಲಿನ ಹಕ್ಕಿರತಕ್ಕದ್ದು.

[b] ಮಗುವು ಮರಣ ಶಾಸನರಹಿತ ಮೃತನ ಮೊದಲೇ ಮೃತವಾಗಿದ್ದಲ್ಲಿ ಉಪಪ್ರಕರಣ ivರಲ್ಲಿ ನಮೂದಿಸಿರುವ ವಿಷಯಗಳಿಗೊಳಪಟ್ಟು ಸದ್ರಿ ಮಗುವು ಸಾಯದೆ ಬದುಕಿದ್ದರೆ ಆ ಮಗುವಿಗೆ ಹೆಣ್ಣಾಗಲಿ ಗಂಡಾಗಲಿ ಎಷ್ಟು ಪಾಲು ದೊರಕುತ್ತಿತ್ತೋ ಅಷ್ಟೇ ಪಾಲು ಆ ಮಗುವಿನ ಸಂತತಿಯವರಿಗೆ ಸಿಕ್ಕತಕ್ಕದ್ದು.

[iv] [a] ಮರಣ ಶಾಸನರಹಿತ ಮೃತನ ತೀರಿ ಹೋದ ಮಗುವಿನಲ್ಲಿ ಹುಟ್ಟಿದ ಅವನ ಮೊಮ್ಮಕ್ಕಳು ಆ ಮಗುವು ಹೆಣ್ಣಾಗಲಿ ಗಂಡಾಗಲಿ ಸಾಯದೆ ಬದುಕಿದ್ದರೆ ಆ ಮಗುವಿಗೆ ಎಷ್ಟು ಪಾಲು ದೊರಕುತ್ತಿತ್ತೋ ಅಷ್ಟೇ ಪಾಲು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

[b] ಅಂಥಾ ಮೊಮ್ಮಗು ಮರಣ ಶಾಸನರಹಿತ ಮೃತನ ಮೊದಲೇ ಮೃತವಾಗಿದ್ದರೆ viನೇ ಉಪ ಪ್ರಕರಣಕ್ಕೊಳಪಟ್ಟು ಸದರಿ ಮಗು ಹೆಣ್ಣಾಗಲಿ ಗಂಡಾಗಲಿ ಜೀವಂತವಿದ್ದರೆ ಎಷ್ಟು ಪಾಲು ಪಡೆಯುತ್ತಿತ್ತೋ ಅಷ್ಟೇ ಪಾಲಿಗೆ ಆ ಮೊಮ್ಮಗುವಿನ ಸಂತತಿಯವರು ಹಕ್ಕುಳ್ಳವರಾಗಿರತಕ್ಕದ್ದು.

[v] ಅದೇ ರೀತಿಯಲ್ಲಿ ಮರಣ ಶಾಸನ ರಹಿತ ಮೃತನ ಆಸ್ತಿಯು ಆತನ ದೂರದ ಜೀವಂತ ವಾರೀಸ್ದಾರರಿಗೆ ಸೇರತಕ್ಕದ್ದು.

[iv] ಮರಣ ಶಾಸನರಹಿತ ಮೃತನು ಸಾಯುವ ಕಾಲದಲ್ಲಿ ಆತನ ಮಗು, ಮೊಮ್ಮಗು, ಅಥವಾ ಇತರ ಸಂತತಿಯವರು ಜೀವಿತರಾಗಿದ್ದಲ್ಲಿ ಆತನ ಆಸ್ತಿಯಲ್ಲಿ ಸದ್ರಿ ಮಗುವಿನ ಮೊಮ್ಮಗುವಿನ,

ವ ಸಂತತಿಯರ ವಾರೀಸ್ದಾರರಿಗೆ ಯಾವ ಪಾಲಿನ ಹಕ್ಕೂ ಇರಲಾರದು.

ದೃಷ್ಟಾಂತಗಳು

[1] Z ಎಂಬ ಒಬ್ಬ ವ್ಯಕ್ತಿಯು ಮರಣಶಾಸನ ಮಾಡದೆ ಸಾಯುವಾಗ ಅವನಿಗೆ A ಮತ್ತು B ಎಂಬ ಇಬ್ಬರು ವಿಧವೆಯರೂ, C ಎಂಬ ಅವನ ತಾಯಿಯೂ D ಎಂಬ ಒಬ್ಬ ಮಗನೂ ಮತ್ತು E ಎಂಬ ಒಬ್ಬ ಮಗಳೂ ಸದ್ರಿ E ಯಲ್ಲಿ ಜನಿಸಿದ F ಎಂಬ ಮೊಮ್ಮಗಳೂ ಮೊದಲೇ ಮೃತಪಟ್ಟಿರುವ G ಎಂಬ ಮಗಳ ಸಂತತಿಯರೂ ಮತ್ತು ಮೊದಲೇ ಮೃತಪಟ್ಟ H ಎಂಬ ಮಗನ ಸಂತತಿಯರೂ ಇರುತ್ತಾರೆ.

A B C D ಮತ್ತು E ಇವರಿಗೆ ಪ್ರತಿಯೊಬ್ಬರಿಗೆ 1/7ನೆ ಆಸ್ತಿಯು ಸಿಕ್ಕುತ್ತದೆ. G ಯ ಸಂತತಿಯವರಿಗೆ 1/7ನೆ ಆಸ್ತಿ H ನ ಸಂತತಿಯವರಿಗೆ 1/7ನೆ ಆಸ್ತಿ ಸಹ ಸಿಕ್ಕುವದು. F ಮೊಮ್ಮಗಳಿಗೆ ಏನೂ ಸಿಕ್ಕುವದಿಲ್ಲ.

[2] Z ಮರಣಶಾಸನ ಮಾಡದೆ ಸಾಯುವಾಗ ತಾಯಿ ಯಾ ವಿಧವೆ ಮೊದಲೆ ಮೃತರಾಗಿದ್ದು A ಎಂಬ ಒಬ್ಬ ಮಗನೂ B ಎಂಬ ಒಬ್ಬ ಮಗಳೂ E ಎಂಬ ಒಬ್ಬ ಮೊಮ್ಮಗನೂ ಮೃತ C ಎಂಬ ಮಗಳಲ್ಲಿ ಜನಿಸಿದ F ಎಂಬ ಮೊಮ್ಮಗಳೂ ಮೃತ D ಎಂಬ ಮಗಳಲ್ಲಿ ಹುಟ್ಟಿದ H ಮತ್ತು J ಮೊಮ್ಮಕ್ಕಳ ಮಕ್ಕಳು ಇಬ್ಬರೂ ಇರುತ್ತಾರೆ.

A ಮತ್ತು B ಪ್ರತಿಯೊಬ್ಬರೂ 1/4 ಅಂಶಕ್ಕೂ E ಮತ್ತು F ಪ್ರತಿಯೊಬ್ಬರೂ 1/8 ಅಂಶಕ್ಕೂ G ಯು 1/8 ಅಂಶಕ್ಕೂ H ಮತ್ತು J ಪ್ರತಿಯೊಬ್ಬರೂ 1/16 ಅಂಶಕ್ಕೂ ಆಸ್ತಿಯಲ್ಲಿ ಹಕ್ಕುಳ್ಳವರಾಗಿರುತ್ತಾರೆ.

[3] Z ಮರಣಶಾಸನ ಮಾಡದೆ ಸಾಯುವಾಗ ತಾಯಿ, ವಿಧವೆ ಯಾ ಮಗು ಮೊದಲೆ ಮೃತರಾಗಿದ್ದು ಮೃತ X ಎಂಬ ಮಗಳಲ್ಲಿ ಹುಟ್ಟಿದ A B ಮತ್ತು C ಎಂಬ ಮೂವರು ಮೊಮ್ಮಕ್ಕಳೂ ಮತ್ತು ಮೃತ Y ಎಂಬ ಮಗನಿಂದ ಹುಟ್ಟಿದ D ಮತ್ತು E ಎಂಬ ಮೊಮ್ಮಕ್ಕಳೂ ಇರುವರು. A B ಮತ್ತು C ಪ್ರತಿಯೊಬ್ಬರೂ 1/6 ಅಂಶಕ್ಕೂ D ಮತ್ತು

E ಪ್ರತಿಯೊಬ್ಬರೂ 1/4 ಅಂಶಕ್ಕೂ ಆಸ್ತಿಯಲ್ಲಿ ಹಕ್ಕುಳ್ಳವರಾಗಿರುತ್ತಾರೆ.

21 ಮರಣ ಶಾಸನರಹಿತ ಮೃತನಿಗೆ ಸಂತತಿಯವರಿಲ್ಲದ ತಾಯಿ ಮತ್ತು ವಿಧವೆ ಯಾ ವಿಧವೆಯರು ಬದುಕಿದ್ದ ಪಕ್ಷದಲ್ಲಿ ಆತನ ಅರೆವಾಸಿ ಆಸ್ತಿಯು ತಾಯಿಗೂ ಇನ್ನರೆವಾಸಿ ಆಸ್ತಿಯು ವಿಧವೆ ಯಾ ವಿಧವೆಯರಿಗೂ ಸರಿಸಮಾನ ಹಕ್ಕಿನಿಂದ ಹೋಗತಕ್ಕದು.

ವಿಧವೆ ಇಲ್ಲದಿರುವಲ್ಲಿ ಇಡೀ ಆಸ್ತಿಯು ತಾಯಿಗೆ ಹೋಗತಕ್ಕದ್ದು.

22 [1] ಮರಣ ಶಾಸನರಹಿತ ಮೃತನಿಗೆ ಸಂತತಿಯವರಾಗಲಿ ಅಥವಾ ತಾಯಿಯಾಗಲಿ ಬದುಕಿರದೆ ತಾಯಿಯ ಕವರು ಮತ್ತು ವಿಧವೆ ಯಾ ವಿಧವೆಯರು ಇದ್ದರೆ ಅರೆವಾಸಿ ಆಸ್ತಿಯು ಆತನ ತಾಯಿಯ ಕವರಿಗೂ ಇನ್ನರೆವಾಸಿ ವಿಧವೆ ಯಾ ವಿಧವೆಯರಿಗೂ ಸಮಪಾಲಿನಲ್ಲಿ ಹೋಗತಕ್ಕದು.

[2] ತಾಯಿಯ ಕವರು ಇಲ್ಲದಿರುವಲ್ಲಿ ಇಡೀ ಆಸ್ತಿಯು ವಿಧವೆ, ಯಾ ವಿಧವೆಯರಿಗೆ ಸರಿಸಮಾನವಾಗಿ ಹೋಗತಕ್ಕದ್ದು. ಮತ್ತು ವಿಧವೆಯರು ಯಾರೂ ಇಲ್ಲದಿದ್ದರೆ ಇಡೀ ಆಸ್ತಿಯು ತಾಯಿಯ ಕವರಿಗೆ ಹೋಗತಕ್ಕದು.

23 [1] ಪ್ರಕರಣ 19, 21, ಮತ್ತು 22ರಲ್ಲಿ ನಮೂದಿಸಿದ ಯಾವ ವಾರೀಸ್ದಾರರೂ ಮರಣ ಶಾಸನರಹಿತ ಮೃತನಿಗೆ ಇಲ್ಲದೆ ಇದ್ದು ಆತನ ತಂದೆ ಮತ್ತು ಅವನ ತಾಯಿಯ ತಾಯಿಯ ಕವರು ಇದ್ದಲ್ಲಿ ಇಡೀ ಆಸ್ತಿಯ ಅರ್ಧಾಂಶವು ತಂದೆಗೂ, ಇನ್ನೊಂದು ಅರ್ಧಾಂಶವು ತಾಯಿಯ ತಾಯಿಯ ಕವರಿಗೂ ಹೋಗತಕ್ಕದ್ದು.

[2] ತಾಯಿಯ ತಾಯಿಯ ಕವರು ಇಲ್ಲದಿದ್ದಲ್ಲಿ ಇಡೀ ಆಸ್ತಿಯು ತಂದೆಗೂ ತಂದೆ ಇಲ್ಲದೆ ಹೋದರೆ ಇಡೀ ಆಸ್ತಿಯು ತಾಯಿಯ ತಾಯಿಯ ಕವರಿಗೂ ಹೋಗತಕ್ಕದು.

24 ಪ್ರಕರಣ 19, 21, 22 ಮತ್ತು 23ರಲ್ಲಿ ನಮೂದಿಸಿದ ಯಾವ ವಾರೀಸ್ದಾರರೂ ಮರಣ ಶಾಸನರಹಿತ ಮೃತನಿಗೆ ಇಲ್ಲದೆ ಹೋದರೆ ಇಡೀ ಆಸ್ತಿಯು ಆತನ ತಾಯಿಯ ತಾಯಿಯ ಕವರಿಗೆ ಅಥವಾ ಸ್ತ್ರೀ

ಸಂತತಿಯ ಹಿರಿಯ ಸ್ತ್ರೀಯರಿಗೆ ದೂರದವರನ್ನು ಹೊರತು ಹತ್ತಿರದವರಿಗೆ ಸೇರತಕ್ಕದ್ದು.

25 ಮರಣ ಶಾಸನ ಮಾಡದೆ ಸಾಯುವ ಒಬ್ಬ ಅಳಿಯ ಸಂತಾನ ಸ್ತ್ರೀಯ ಸ್ವಾರ್ಜಿತ ಯಾ ಸ್ವಂತ ಆಸ್ತಿಯು ಈ ಕೆಳಗೆ ಹೇಳಿದ ರೀತಿಯಲ್ಲಿ ಹೋಗತಕ್ಕದ್ದು.

[1] ಇಡೀ ಆಸ್ತಿಯು ಅವಳ ಸಂತತಿಯುವರಿಗೆ ಹೋಗತಕ್ಕದು. ಆ ಸಂತತಿಯುವರೊಳಗೆ ಆಗತಕ್ಕ ಪಾಲನ್ನು ಪ್ರಕರಣ 20 ಉಪಪ್ರಕರಣ iii ರಿಂದ viರ ವರೆಗೆ ವಿಧಿಸಿದ ನಿಯಮಗಳಿಗನುಸರಿಸಿ ಮಾಡತಕ್ಕದು.

[2] [a] ಅಂತಹ ಸಂತತಿಯುವರು ಇಲ್ಲದಿದ್ದಲ್ಲಿ ಆಸ್ತಿಯ ಅರ್ಧಾಂಶವು ಮರಣ ಶಾಸನರಹಿತ ಸ್ತ್ರೀಯ ತಾಯಿಯ ಕವರಿಗೂ ಉಳಿದ ಅರ್ಧಾಂಶವು ಆಕೆಯ ಗಂಡನಿಗೂ ಹೋಗತಕ್ಕದ್ದು.

[b] ಅವಳ ತಾಯಿಯ ಕವರು ಇಲ್ಲದಿದ್ದಲ್ಲಿ ಇಡೀ ಆಸ್ತಿಯು ಆಕೆಯ ಗಂಡನಿಗೂ, ಗಂಡನಿಲ್ಲದಿದ್ದಲ್ಲಿ ಆಕೆಯ ತಾಯಿಯ ಕವರಿಗೂ ಹೋಗತಕ್ಕದ್ದು.

[3] ಮೇಲೆ ಹೇಳಿದ ಯಾವ ಸಂಬಂಧಿಕರೂ ಇಲ್ಲದೆ ಇದ್ದಲ್ಲಿ ಆಸ್ತಿಯು ತಾಯಿಯ ತಾಯಿಯ ಕವರಿಗೂ ಅಥವಾ ಸ್ತ್ರೀಯ ಸಂತತಿಯ ಹಿರಿಯ ಸ್ತ್ರೀಯರಿಗೆ ದೂರದವರನ್ನು ಹೊರತು ಹತ್ತಿರದವರಿಗೆ ಸೇರತಕ್ಕದ್ದು.

26 [1] ಅಳಿಯ ಸಂತಾನ ಕಾನೂನಿಗೊಳಪಡದೆ ಮರಣ ಶಾಸನ ವಿಲ್ಲದೆ ಮೃತಪಡುವ ಗಂಡಸು—

[a] ಈ ಕಾನೂನು ಜ್ಯಾರಿಗೆ ಬರುವ ಮುಂಚೆ ಪ್ರಕರಣ 4ರ ಪ್ರಕಾರ ಸಿಂಧುವಾಗುವ ಮದುವೆಯನ್ನು ಅಳಿಯಸಂತಾನ ಹೆಂಗಸಿನ ಕೂಡೆ ಮಾಡಿಕೊಂಡಿದ್ದಲ್ಲಿ ಅಥವಾ

[b] ಆ ಕಾನೂನು ಜ್ಯಾರಿಗೆ ಬರುವ ತಾರೀಕಿನಲ್ಲಿ ಅಥವಾ ನಂತರ ಸದ್ರಿ ಪ್ರಕರಣದಲ್ಲಿ ಸಿಂಧುವಾಗುವ ಮದುವೆಯನ್ನು ಅಳಿಯ ಸಂತಾನ ಹೆಂಗಸಿನ ಕೂಡೆ ಮಾಡಿ ಕೊಂಡಲ್ಲಿ ಮತ್ತು

[ii] ಅಂಥಾ ಮದುವೆಯಿಂದ ಅಥವಾ ಮದುವೆಗಳಿಂದ

ಈ ಕೆಳಗೆ ಕಾಣಿಸಿದ ವಾರೀಸ್ದಾರರನ್ನು ಒಬ್ಬ ಯಾ ಹೆಚ್ಚು ಸಂಬಂಧಿಕರಿದ್ದಲ್ಲಿ

[a] ವಿಧವೆ ಅಥವಾ ವಿಧವೆಯರು
[b] ಮಕ್ಕಳು
[c] ಸಂತತಿಯವರು.

ಇರುವಲ್ಲಿ ಅಂಥಾ ಸಂಬಂಧಿಕ ವ ಸಂಬಂಧಿಕರಿಗೆ ಶಾಸನರಹಿತ ಮೃತನು ಅನುಸರಿಸಿಕೊಂಡು ಬರುತ್ತಿದ್ದ ಕಾನೂನಿನ ಪ್ರಕಾರ ಅವನಿಗೆ ವಾರಿಸ್ದಾರರಾದ ಸಂಬಂಧಿಕರು ಇದ್ದಲ್ಲಿ ಸ್ವಾರ್ಜಿತ ಅಥವಾ ಸ್ವಂತದ ಆಸ್ತಿಯಲ್ಲಿ ಅರ್ಧಾಂಶ ಸಿಕ್ಕತಕ್ಕದ್ದು. ಹಾಗೆ ಶಾಸನರಹಿತ ಮೃತನಿಗೆ ಅಂತಹ ವಾರಿಸ್ದಾರರು ಇಲ್ಲದಿದ್ದಲ್ಲಿ ಪೂರಾ ಆಸ್ತಿ ಸಿಗತಕ್ಕದ್ದು.

ಆವರೆ ಮರಣ ಶಾಸನರಹಿತ ಮೃತನ ಉತ್ತರ ಕ್ರಿಯೆಗಳ ನ್ಯಾಯವಾದ ಖರ್ಚನ್ನು ಅಂಥ ಸ್ವಾರ್ಜಿತ ಅಥವಾ ಸ್ವಂತ ಆಸ್ತಿಯಿಂದ ತೆಗೆಯತಕ್ಕದ್ದು.

[2] ಉಪಪ್ರಕರಣ [ii] ನೇಯ [a] [b] ಮತ್ತು [c] ಒಳ ಕಲಮುಗಳಲ್ಲಿ ನಮೂದಿಸಿದ ಸಂಬಂಧಿಕರೊಳಗೆ ಪ್ರಕರಣ 20 ರ ಒಳ ಪ್ರಕರಣ [i] [iii] [iv] [v] ಮತ್ತು [vi] ನೆ ಉಪಪ್ರಕರಣಗಳಲ್ಲಿ ನಮೂದಿಸಿದ ನಿಯಮುಗಳಿಗನುಸಾರವಾಗಿ ಪಾಲಾಗತಕ್ಕದ್ದು.

27 [1] ಈ ಪರಿಚ್ಛೇದದಲ್ಲಿ ನಮೂದಿಸಿದ ಮೇರೆಗೆ ಮರಣ ಶಾಸನ ವಿಲ್ಲದೆ ಮೃತಪಡುವ ಯಾವದಾವದರೊಂದು ಗಂಡಸಿನ ವ ಹೆಂಗಸಿನ ಸರ್ವಾದಿ ಆಸ್ತಿಯು ಯಾವುದಾವದರೊಂದು ಕವರಿಗೇನೇ ಸೇರತಕ್ಕ ಆ ಕವರಿನಲ್ಲಿ ಪಾಲಾಗುವ ವರೆಗೆ ಅಂಥ ಆಸ್ತಿಯ ಸ್ವಾಧೀನತೆ ಮತ್ತು ಆಡಳಿತೆ ಸದ್ರಿ ಕವರಿನ ಯಜಮಾನನ ಹಕ್ಕಿನದ್ದಾಗಿರುತ್ತದೆ.

[2] ಇನ್ನಿತರ ಸಂದರ್ಭಗಳಲ್ಲೆಲ್ಲ ಅಂತಹ ಮರಣ ಶಾಸನರಹಿತ ಮೃತನ ವಾರಿಸ್ದಾರರ ಪೈಕಿ ಅತಿ ಹಿರಿಯನಾದವನು [ಆ ಆಸ್ತಿಯು ಯಾವ ಅಂಶವಾದರೂ ಯಾವುದಾವದರೊಂದು ಕವರಿಗೆ ಹೋಗುವುದೋ ಆ ಕವರಿನ ಯಾವತ್ತೂ ಮೆಂಬರರ ಸಹಿತ] ಅಂಥಾ ಆಸ್ತಿ ಪಾಲಾಗುವ ತನಕ ಅದರ ಸ್ವಾಧೀನತೆಗೆ ಮತ್ತು ಆಡಳಿತೆಗೆ ಹಕ್ಕುದಾರನಾಗಿರತಕ್ಕದ್ದು.

ಪರಿಚ್ಛೇದ V

ಕುಟುಂಬ ಮತ್ತು ಅದರ ಆಡಳಿತೆ

28 [1] ಯಜಮಾನನು ಕುಟುಂಬದ ಆದಾಯ ವೆಚ್ಚಗಳ ನಿಜವಾದ ಲೆಕ್ಕ ಪತ್ರಗಳನ್ನು ಸರಿಯಾಗಿ ಇಡತಕ್ಕದ್ದು; ವರ್ಷಕ್ಕೊಮ್ಮೆ ಪ್ರತಿ ಅಗೋಸ್ತು ಮತ್ತು ಸಪ್ಟಂಬರ ತಿಂಗಳುಗಳಲ್ಲಿ ಹಿಂದಿನ ಫಸಲಿಯ ಲೆಕ್ಕ ಪತ್ರಗಳನ್ನು ಕುಟುಂಬದ ಪ್ರಾಯಸ್ಥ ಮೆಂಬರರಿಗೆ ಕುಟುಂಬದ ಮನೆಯಲ್ಲಿ ಪರಿಶೀಲಿಸುವ ಹಕ್ಕು ಇರತಕ್ಕದ್ದು. ಮತ್ತು ಕುಟುಂಬದ ಮೆಂಬರರು ಈ ಲೆಕ್ಕ ಪತ್ರಗಳ ನಕಲನ್ನಾಗಲೀ, ಅದರ ಕೆಲವು ಅಂಶವನ್ನಾಗಲಿ ತೆಗೆಯಲಿಕ್ಕೆ ಹಕ್ಕುದಾರರಾಗಿರತಕ್ಕದ್ದು.

ಆದರೆ ಯಾವುದೇ ವರ್ಷವೊಂದರ ಎಲ್ಲಾ ವಿಧದ ಒಟ್ಟು ಆದಾಯ ರೂ. 3,000 ಕ್ಕೆ ಮೀರದ ಕುಟುಂಬಗಳಿಗೆ ಈ ಉಪ ಪ್ರಕರಣವು ಅನ್ವಯಿಸಲಾರದು.

[2] ಉಪಪ್ರಕರಣ [i] ರಲ್ಲಿ ನಮೂದಿಸಿದ ಲೆಕ್ಕ ಪತ್ರಗಳನ್ನು ಪರಿಶೀಲಿಸುವಗೋಸ್ಕರ ಒದಗಿಸಿಕೊಡದಿದ್ದಲ್ಲಿ ಕುಟುಂಬದ ಎಲ್ಲಾ ಅಥವಾ ಯಾವದಾದರೊಂದು ಅಂಶದ ಸ್ಥಿರಾಸ್ತಿ ಇರುವ ಸ್ಥಳದ ಅಥವಾ ಯಜಮಾನನು ವಾಸಿಸುವ ಸ್ಥಳದ ಮೇಲೆ ಅಧಿಕಾರವಿರುವ ಅತಿ ಕೆಳ ಕೋರ್ಟು, ಕುಟುಂಬದ ಯಾರಾದರೊಬ್ಬ ಪ್ರಾಯಸ್ಥ ಮೆಂಬರರ ಅರ್ಜಿಯ ಮೇಲೆ ಯಜಮಾನನಿಗೆ ನೋಟೀಸು ಕೊಟ್ಟು, ಕೋರ್ಟಿನಲ್ಲಿ ಲೆಕ್ಕ ಪತ್ರಗಳನ್ನು ಹಾಜರುಪಡಿಸುವಂತೆ ಹುಕುಮುಕೊಟ್ಟು, ಅಂಥ ಮೆಂಬರನು ಲೆಕ್ಕಪತ್ರಗಳನ್ನು ಪರಿಶೀಲಿಸಲಿಕ್ಕೂ ಅಂಥ ಲೆಕ್ಕ ಪತ್ರಗಳ ನಕಲುಗಳನ್ನಾಗಲಿ ಅದರ ಅಂಶವನ್ನಾಗಲಿ ತೆಗೆಯಲಿಕ್ಕೂ ಬಿಡುವದು.

[3] ಉಪಪ್ರಕರಣ [2] ರ ಪ್ರಕಾರ ಕೋರ್ಟು ಕೊಡುವ ಹುಕುಮನ್ನು ಗೊತ್ತಿದ್ದು ಮೀರುವವರು ಮೂರು ತಿಂಗಳುಗಳ ವರೆಗಿನ ಸಜೆಗೂ ಅಥವಾ ರೂ. 500ರ ವರೆಗಿನ ಜುಲ್ಮಾನೆಗೂ ಅಥವಾ ಇವೆರಡಕ್ಕೂ ಗುರಿಯಾಗುವರು.

ಆದರೆ ಯಾವ ಕೋರ್ಟಿನ ಹುಕುಂ ಉಲ್ಲಂಘನೆಯಾಗಿಯದೋ

ಆ ಕೋರ್ಟಿನ ಅಥವಾ ಹುಕುಂ ಕೊಟ್ಟ ಅಂಥ ಕೋರ್ಟು ಯಾವ ಮೇಲು ಕೋರ್ಟಿಗೆ ಒಳಪಟ್ಟಿರುತ್ತದೋ ಅಂಥ ಮೇಲ್ಕೋರ್ಟಿನ ಬರಹ ಮೂಲಕದ ಫಿರ್ಯಾದಿಯಿಲ್ಲದೆ ಬೇರೆ ಯಾವ ವಿದ್ಯಮಾನಗಳಿಂದಲೂ ಯಾವ ಕೋರ್ಟಿಗೂ ಈ ಉಪಪ್ರಕರಣ ಪ್ರಕಾರ ಆಗತಕ್ಕ ತಕ್ಷೀರಿನ ಕುರಿತು ತೀರ್ಮಾನಿಸುವರೆ ಅಧಿಕಾರವಿರದು.

29 [1] ಯಜಮಾನನು ಕುಟುಂಬದ ಗರ್ಜಿ, ಯಾ ಪ್ರಯೋಜನಕ್ಕೆ ಮತ್ತು ಕುಟುಂಬದ ಪ್ರಾಯಸ್ಥ ಮೆಂಬರರ ಬರಹ ಮೂಲಕದ ಒಪ್ಪಿಗೆ ಯಿಂದ ಪ್ರತಿಫಲಕ್ಕೆ ಮಾಡಿದ ದಸ್ತಾವೇಜಿನ ಹೊರತು ಮಿಕ್ಕ ಕುಟುಂಬದ ಯಾವತ್ತೂ ಸ್ಥಿರಾಸ್ತಿಯ ಕ್ರಯ ಸಾಧನವಾಗಲಿ ಭೋಗ್ಯಾದಿ ಅಡವು ಆಗಲಿ ಅಥವಾ 5 ವರ್ಷಕ್ಕೆ ಮೀರಿದ ಗೇಣಿಚೀಟಾಗಲಿ ಕುಟುಂಬವನ್ನು ಬದ್ಧೀಕರಿಸತಕ್ಕದ್ದಲ್ಲ.

[2] ಕುಟುಂಬದ ಗರ್ಜಿ ಅಥವಾ ಪ್ರಯೋಜನಕ್ಕಾಗಿ ಪ್ರತಿ ಫಲಕ್ಕೆ ಕುಟುಂಬದ ಯಜಮಾನನು ಬರಕೊಡುವ ಅಡವು ದಸ್ತಾವೇಜು ಅಥವಾ ಗೇಣಿಚೀಟು ಹೊರತು ಮಿಕ್ಕ ಭೋಗ್ಯಾದಿ ಅಡವು ದಸ್ತಾವೇಜು ಮತ್ತು 5 ವರ್ಷಕ್ಕೆ ಮಿಕ್ಕಿದ ಸಂಪೂರ್ಣ ಅಥವಾ ಕೆಲವಂಶ ವಾಪಸು ಕೊಡುವ ಶರ್ತದಿಂದ 5 ವರ್ಷಕ್ಕೆ ಮೀರದ ಮುಂಗಡ ಪಡೆದು ಕೊಡುವ ಗೇಣಿ ಚೀಟು ಕುಟುಂಬವನ್ನು ಬದ್ಧೀಕರಿಸತಕ್ಕದ್ದಲ್ಲ.

[3] 5 ವರುಷಕ್ಕೆ ಮೀರದ ವಾಯಿದೆಯೊಳಗಿನ ಸಂಪೂರ್ಣವಾಗಿಯಾಗಲಿ ಅಂಶವಾಗಿಯಾಗಲಿ ಮುಂಗಡ ಹಿಂದೆ ಕೊಡುವ ಶರ್ತವಿಲ್ಲದ ರೀತಿಯಲ್ಲಿ ಕುಟುಂಬದ ಯಜಮಾನನು ತನ್ನ ಆಡಳಿತೆ ಕಾಲದಲ್ಲಿ ಗೇಣಿಗೆ ಕೊಡುವರೆಯೂ ಅಥವಾ ಗೇಣಿಗೆ ಕೊಟ್ಟದ್ದನ್ನು ಪುನಃ ಕೊಟ್ಟಲ್ಲಿ ಅಂಥಾ ಅಧಿಕಾರಿಗಳಿಗೆ ಈ ಪ್ರಕರಣದಿಂದ ಯಾವ ಆತಂಕವೂ ಇರಲಾರದೆಂದು ಪರಿಗಣಿಸಲ್ಪಡತಕ್ಕದ್ದು.

30 ಯಜಮಾನನು ಕುಟುಂಬದ ಗರ್ಜಿಗಾಗಿ ಬರಕೊಟ್ಟ ಈಡು ಅಥವಾ ಪಡೆದ ಸಾಲವಲ್ಲದೆ ಇತರ ಕುಟುಂಬದ ಆಸ್ತಿಯ ಸ್ವಾಧೀನವಿಲ್ಲದ ಈಡಾಗಲಿ ಮತ್ತು ಸಾಲವಾಗಲಿ ಕುಟುಂಬವನ್ನು ಬದ್ಧೀಕರಿಸತಕ್ಕದ್ದಲ್ಲ.

31 [1] ಕುಟುಂಬದ ಪ್ರತಿಯೊಬ್ಬ ಮೆಂಬರನು ಕುಟುಂಬದ ಮನೆಯಲ್ಲಿ ವಾಸಿಸಿರಲಿ ಅಥವಾ ಇಲ್ಲದಿರಲಿ ಕುಟುಂಬದ ಹುಟ್ಟುವಳಿ ಮತ್ತು ಸ್ಥಿತಿಗತಿ ಮೇರೆಗೆ ಮತ್ತು ಅಂಥಾ ಮೆಂಬರನ ನ್ಯಾಯವಾದ ಆವಶ್ಯಕತೆ ಮೇರೆಗೆ ಪ್ರತ್ಯೇಕ ಜೀವನಾಂಶ ಪಡೆಯುವರೆ ಹಕ್ಕುಳ್ಳವನಾಗಿರುತ್ತಾನೆ.

ವಿವರಣೆ: ಅವನಿಗೆ ಕೊಡಿಸೋಣಾಗುವ ಜೀವನಾಂಶವನ್ನು ನಿರ್ಧರಿಸುವಾಗ ಈ ಕಾನೂನು ಮೇರೆಗೆ ಆಗತಕ್ಕ ಪಾಲಿನಲ್ಲಿ ಆ ಮೆಂಬರನಿಗೆ ಸಿಗತಕ್ಕ ಪಾಲಿನ ಅಂಶವನ್ನು ಆಧಾರವಾಗಿ ಇಟ್ಟುಕೊಳ್ಳತಕ್ಕದ್ದಲ್ಲ.

[2] ಕುಟುಂಬದ ಒಬ್ಬ ಮೆಂಬರನಿಗೆ ಕೊಡಿಸೋಣಾಗುವ ಜೀವನಾಂಶವು ಕುಟುಂಬದ ಉತ್ಪತ್ತಿಯಿಂದಲೇ ಮಾತ್ರ ಕೊಡಿಸೋಣಾಗಬೇಕು. ಮತ್ತು ಅಂತಹ ಉತ್ಪತ್ತಿಯ ಮೇಲೆ ಜವಾಬ್ದಾರಿ ಇರತಕ್ಕದ್ದು.

[3] ಈ ಕಾನೂನು ಜ್ಯಾರಿಗೆ ಬಂದ ನಂತರ 2 ವರ್ಷಕ್ಕಿಂತ ಮೇಲಿನ ಜೀವನಾಂಶ ಬಾಕಿ ಕೇಳಿ ಮಾಡುವ ದಾವೆ ಇರುವುದಿಲ್ಲ.

32 [1] ಯಜಮಾನನು

[i] ಕುಟುಂಬದ ಕುರಿತು ಸರಿಯಾಗಿ ನಡೆಯದಿದ್ದಲ್ಲಿ, ಅಧಿಕಾರ ಮೀರಿ ನಡೆದಲ್ಲಿ, ವಿಶ್ವಾಸಕ್ಕೆ ವಿರೋಧವಾಗಿ ವರ್ತಿಸಿದ್ದಲ್ಲಿ ಅಥವಾ ಕರ್ತವ್ಯ ವಿಮುಖನಾಗಿ ನಡೆದಲ್ಲಿ ಅಥವಾ

[ii] ಕುಟುಂಬದ ಉತ್ಪತ್ತಿಯನ್ನು ಅಥವಾ ಆಸ್ತಿಗಳನ್ನು ಅಪಹರಿಸಿದ್ದಲ್ಲಿ ಅಥವಾ ದುರ್ವಿನಿಯೋಗ ಮಾಡಿದ್ದಲ್ಲಿ; ಅಥವಾ

[iii] ಕುಟುಂಬದ ಯಜಮಾನನಾಗಿ ಮಾಡತಕ್ಕ ಕೆಲಸಗಳನ್ನು ಮಾಡುವರೆ ಅರ್ಹನಿಲ್ಲದ ರೀತಿಯಲ್ಲಿ, ಹುಚ್ಚನಾಗಿದ್ದಲ್ಲಿ ಅಥವಾ ದೇಹ ಸ್ಥಿತಿ, ಮೆದುಳಿನ ಸ್ಥಿತಿ ಹಾಳಾಗಿದ್ದಲ್ಲಿ ಅಥವಾ

[iv] ಯಜಮಾನನಾಗಿರುವುದು ಕುಟುಂಬದ ಶ್ರೇಯಸ್ಸಿಗೆ ಸರಿಯಲ್ಲವೆಂತ ಕೋರ್ಟಿಗೆ ತೋರುವ ಯುಕ್ತವಾದ ಯಾವದಾದರೊಂದು ಕಾರಣವಿದ್ದಲ್ಲಿ

ಅಂಥವನನ್ನು ಯಜಮಾನಿಕೆಯಿಂದ ತೆಗೆದು ಹಾಕುವರೆ ಕುಟು

ಬದ ಯಾವನೊಬ್ಬ ಮೆಂಬರನು ಸಿವಿಲ್ ಕೋರ್ಟಿನಲ್ಲಿ ದಾವೆ ತರಬಹುದು.

[2] ಉಪಪ್ರಕರಣ [1]ರ ಪ್ರಕಾರ ದಾವೆಯನ್ನು ತನ್ನಿಕ್ಕಿ ಮಾಡುವಾಗ ಕೋರ್ಟಿಗೆ ಯಜಮಾನನನ್ನು ತೆಗೆದು ಹಾಕುವುದು ಅಗತ್ಯವಿಲ್ಲವೆಂತ ಕಂಡುಬಂದಲ್ಲಿ ಕುಟುಂಬದ ಹಿತದೃಷ್ಟಿಯಿಂದಲೂ ಮತ್ತು ದಾವೆಯ ಸಂದರ್ಭಗಳಿಗನುಸರಿಸಿಯೂ ಯುಕ್ತ ತೋರುವಂತೆ ಹುಕುಂ ಕೊಟ್ಟು ತೀರ್ಮಾನಿಸಬಹುದು.

33 ರಿಜಿಸ್ಟ್ರಿ ದಾಖಲೆ ಮೂಲಕ ಯಾವ ಯಜಮಾನನಾದರೂ ತನ್ನ ಆಡಳಿತೆ ಹಕ್ಕನ್ನು ಬಿಟ್ಟುಬಿಡಬಹುದು.

34 ಈ ಪರಿಚ್ಛೇದದ ಪ್ರಕರಣಗಳು ಪ್ರತ್ಯೇಕ ಆಸ್ತಿ ಸ್ವಾಧೀನವಿರುವ ಎಲ್ಲಾ ಕವರುಗಳಿಗೂ ಅದು ಕುಟುಂಬವಾಗಿದ್ದರೆ ಹೇಗೋ ಹಾಗೆ ಅನ್ವಯಿಸತಕ್ಕದ್ದು.

ಪರಿಚ್ಛೇದ VI

ವಿಭಾಗ

35 [1] ಕುಟುಂಬದಲ್ಲಿ ಪರಾಧೀನ ಮಾಡಬಹುದಾದ ಯಾವತ್ತೂ ಆಸ್ತಿಗಳಲ್ಲಿ ಪ್ರಾಯಸ್ಥರಾದ ಬಹುಸಂಖ್ಯಾಕ ಮೆಂಬರರನ್ನು ಕೂಡಿಕೊಂಡು ಯಾವದಾದರೊಂದು ಕವರು ಅದರ ಅಂಶವನ್ನು ಕೇಳಬಹುದು ಮತ್ತು ಕುಟುಂಬದಿಂದ ಪ್ರತ್ಯೇಕ ಹೋಗಬಹುದು.

ಆದರೆ—

[i] ಅಂಥ ಒಂದು ಕವರಿನಲ್ಲಿ ಇಬ್ಬರೇ ವ್ಯಕ್ತಿಗಳಿರುವಲ್ಲಿ ಅವರಲ್ಲಿ ಯಾರಾದರೊಬ್ಬನು ಪಾಲು ಕೇಳಬಹುದು.

[ii] ಯಾವದಾದರೊಂದು ಕವರಿಗೂ ಮತ್ತು ಕುಟುಂಬದ ಇನ್ನಿತರ ಕವರು ಯಾ ಕವರುಗಳಿಗೂ ಸಮಾನ ಸಂಬಂಧವಿರುವ ಐವತ್ತು ವರುಷಕ್ಕೆ ಮೀರದ ಹಿರಿಯಳ ಜೀವಿತಕಾಲದಲ್ಲಿ ಪಾಲು ಕೇಳಲಿಕ್ಕೆ—

[a] ಅವಳು ಬರಹ ಮೂಲಕ ಸಮ್ಮತಿಕೊಟ್ಟಲ್ಲದೆ ಅಥವಾ

[ii] ಪಾಲಿನ್ನು ಅಪೇಕ್ಷಿಸಿ ಪ್ರಾಯಸ್ಥರಾದ ಮೆಂಬರರಲ್ಲಿ ಕಿರಿಯ ಮೆಂಬರರು ಸೇರದ ವಿನಹ
ಪಾಲುಕೇಳಲು ಹಕ್ಕಿರುವದಿಲ್ಲ.

[iii] ಆ ಸಮಾನ ಸಂಬಂಧವಿರುವ ಹಿರಿಯಳು ತಾನಾಗಿಯೇ ಪಾಲು ಕೇಳಬಹುದು.

[2] ಕವರಿನವರು ಹೊಂದಿದ ಪಾಲನ್ನು ಕುಟುಂಬದ ಆಸ್ತಿಗೆ ಅನ್ವಯಿಸುವ ನಿಯಮಗಳಿನುಸರ್ಸಿ ಪಡೆದ್ದಾಗಿರುವದು.

ವಿವರಣೆ: ಈ ಪರಿಚ್ಛೇದಕ್ಕಾಗಿ—

[a] ಒಬ್ಬ ಗಂಡು ಮೆಂಬರನಾಗಲಿ ಅಥವಾ ಸ್ತ್ರೀ ಸಂತತಿಯಿಲ್ಲದ ಹೆಣ್ಣು ಮೆಂಬರಳಾಗಲಿ ಅವನಿಗಿಂತ ಅಥವಾ ಅವಳಿಗಿಂತ ಕುಟುಂಬದಲ್ಲಿ ಹಿರಿಯಳಾದ ಹೆಣ್ಣು ಮೆಂಬರಳು ಜೀವಂತಳಾಗಿ ಇಲ್ಲದಿರುವಲ್ಲಿ ಒಂದು ಕವರಾಗಿ ಪರಿಗಣಿಸಲ್ಪಡತಕ್ಕದ್ದು.

[b] ಅಂಥ ಗಂಡು ಮೆಂಬರನಿಗೆ ಯಾ ಹೆಣ್ಣು ಮೆಂಬರಳಿಗೆ 50 ವರುಷ ಪ್ರಾಯ ಪೂರ್ತಿಯಾಗಿದ್ದಲ್ಲಿ ಅವರೇ ಒಂದು ನಿಸ್ಸಂತತಿ ಕವರೆಂದು ಪರಿಗಣಿಸಲ್ಪಡತಕ್ಕದ್ದು.

36 [1] ಪ್ರಕರಣ 35ರ ಪ್ರಕಾರ ಪಾಲಿಗೆ ಹಕ್ಕಿರುವ ಯಾವದಾವದೊಂದು ಕವರಿಗೆ ಉಪಪ್ರಕರಣ [2]ರ ನಿಯಮಗಳಿಗೆ ಅನುಸರಿಸಿ ಕುಟುಂಬದ ಆಸ್ತಿಗಳಲ್ಲಿ ಪಾಲು ಕೊಡತಕ್ಕದ್ದು.

[2] [ ] ಪಾಲು ಕೇಳುವ ತಾರೀಕಿನಲ್ಲಿ ತಮ್ಮ ಸಮಾನ ಸಂಬಂಧವುಳ್ಳ ಹಿರಿಯಳಿಗೆ ಅತಿ ಸಮೀಪವಿರುವ ಮೆಂಬರರಲ್ಲೊಬ್ಬರು ಅಂಥ ಹಿರಿಯಳಿಂದ ನಾಲ್ಕು ವ ಜಾಸ್ತಿ ತಲೆಯಿಂದ ದೂರವಾಗಿದ್ದಲ್ಲಿ ಪಾಲು ಈ ಕೆಳಗೆ ನಮೂದಿಸಿದ ರೀತಿಯಲ್ಲಿ ಆಗತಕ್ಕದ್ದು:

[i] ಕುಟುಂಬದ ಮುಕ್ಕಾಲಂಶ ಆಸ್ತಿಗಳಲ್ಲಿ ಕುಟುಂಬದ ಆಗ ಜೀವಂತರಾಗಿರುವ ಎಲ್ಲಾ ಮೆಂಬರರೊಳಗೆ ತಲೆಸರ್ತಿ ಪಾಲಾದ್ದಲ್ಲಿ ಕವರಿಗೆ ಎಷ್ಟು ದೊರೆಯುವದೊ ಅಷ್ಟು ಅಂಶವನ್ನು ಆ ಕವರಿಗೆ ಕೊಡಿಸತಕ್ಕದ್ದು.

[ii] ಕುಟುಂಬದ ಉಳಿದ ಕಾಲಂಶ ಆಸ್ತಿಗಳಲ್ಲಿ ಕವರು

ಗಳೊಳಗೆ ಬುಡಸರ್ತಿ ಪಾಲಾದ್ದಲ್ಲಿ ಎಷ್ಟು ಬರುವದೊ ಅಷ್ಟು ಅಂಶ ವನ್ನು ಆ ಕವರಿಗೆ ಕೊಡಿಸತಕ್ಕದ್ದು.

[b] ಇತರ ಸಂದರ್ಭಗಳಲ್ಲಿ ಈ ಕೆಳಗೆ ನಮೂದಿಸಿದ ರೀತಿ ಯಲ್ಲಿ ಪಾಲಾಗತಕ್ಕದ್ದು:-

[i] ಕುಟುಂಬದ ಅರ್ಧಾಂಶ ಆಸ್ತಿಗಳಲ್ಲಿ ಕುಟುಂಬದ ಆಗ ಜೀವಂತರಾಗಿರುವ ಎಲ್ಲಾ ಮೆಂಬರರೊಳಗೆ ತಲೆಸರ್ತಿ ಪಾಲಾದ್ದಲ್ಲಿ ಕವರಿಗೆ ಎಷ್ಟು ದೊರೆಯುವದೋ ಅಷ್ಟು ಅಂಶವನ್ನು ಆ ಕವರಿಗೆ ಕೊಡಿಸತಕ್ಕದ್ದು.

[ii] ಕುಟುಂಬದ ಉಳಿದ ಅರ್ಧಾಂಶ ಆಸ್ತಿಗಳಲ್ಲಿ ಕವರು ಗಳೊಳಗೆ ಬುಡಸರ್ತಿ ಪಾಲಾದ್ದಲ್ಲಿ ಎಷ್ಟು ಬರುವದೋ ಅಷ್ಟು ಅಂಶ ವನ್ನು ಆ ಕವರಿಗೆ ಕೊಡಿಸತಕ್ಕದ್ದು.

[c] ಉಪಪ್ರಕರಣ [a] [ii] ಅಥವಾ [b] [ii]ರ ಪ್ರಕಾರ ಪಾಲಾಗುವಲ್ಲಿ ಸಮಾನ ಸಮ್ಮಂದವುಳ್ಳ ಹಿರಿಯಳು ಜೀವಂತವಾಗಿದ್ದರೆ ಅವಳಿಗೆ ಅವಳ ಒಂದು ಮಗುವಿನಷ್ಟೇ ಪಾಲು ಪಡೆಯಲು ಹಕ್ಕಿರ ತಕ್ಕದ್ದು.

[d] ಪಾಲು ಕೇಳುವ ಒಂದು ಕವರು ಕುಟುಂಬದ ಒಂದು ಮುಖ್ಯ ಕವರಲ್ಲದ್ದಲ್ಲಿ ಮೇಲೆ ಸೂಚಿಸಿದ ಪ್ರಕರಣಗಳ ಮೇರೆಗೆ ಮುಖ್ಯ ಕವರಿನ ಪಾಲನ್ನು ಮೊದಲು ನಿಶ್ಚಯಿಸಿ ಪಾಲು ಕೇಳುವ ಕವರು ಬರುವ ವರೆಗೆ ಅಂಥ ನಿರ್ಣಯವಾದ ಪಾಲನ್ನು ಪ್ರಕರಣ [b]ಯಲ್ಲಿ ನಮೂದಿಸಿದ ಪ್ರಕಾರವೇ ವಿಂಗಡಿಸಲ್ಪಡತಕ್ಕದ್ದು.

[e] [a] ಯಿಂದ [d] ವರೆಗಿನ ಪ್ರಕರಣಗಳ ನಿಯಮುಗಳು ಈ ಕಾನೂನು ಜ್ಯಾರಿಗೆ ಬಂದ ನಂತರ 15 ವರುಷದ ವರೆಗೆ ಕೇಳತಕ್ಕ ಪಾಲುಗಳಿಗೆ ಮಾತ್ರ ಅನ್ವಯಿಸತಕ್ಕದ್ದು.

[f] ಮೇಲೆ ಹೇಳಿದ ವಾಯಿದೆ ನಂತರ ಒಂದು ಕುಟುಂಬದಲ್ಲಿ ಪಾಲಾಗುವಾಗ ಎಲ್ಲಾ ಕವರುಗಳೊಳಗೆ ಬುಡ ಸರ್ತಿ ಪಾಲಾದರೆ ಎಷ್ಟು ಸಿಕ್ಕುವದೋ ಅಷ್ಟೇ ಅಂಶವು ಒಂದು ಕವರಿಗೆ ಕೊಡಿಸತಕ್ಕದ್ದು.

[g] ಪ್ರಕರಣ f ಪ್ರಕಾರ ಪಾಲಾಗುವಾಗ ಪಾಲು ಕೇಳುವ

ಕವರು ಕುಟುಂಬದ ಒಂದು ಮುಖ್ಯ ಕವರಲ್ಲವಾಗಿರುವಲ್ಲಿ ಆ ಪ್ರಕರಣ ಗಳ ಮೇರೆಗೆ ಸೂಚಿಸಿದ ಪ್ರಕಾರ ಮೊದಲು ಮುಖ್ಯ ಕವರಿನ ಪಾಲನ್ನು ನಿಶ್ಚಯಿಸಿ ಪಾಲು ಕೇಳುವ ಕವರು ಬರುವ ವರೆಗೆ ಅಂಥಾ ನಿರ್ಣಯ ವಾದ ಪಾಲು ಅದೇ ರೀತಿಯಿಂದ ನಿಂಗಡಿಸಲ್ಪಡತಕ್ಕದ್ದು.

[h] ಪಾಲಾಗುವಾಗ ಒಂದು ಕವರಿಗೆ ಸಿಗತಕ್ಕ ಅಂಶವು ಆ ಕವರು ಪಾಲು ಕೇಳಿದ ತಾರೀಕಿನಲ್ಲಿ ಅದಕ್ಕೆ ಸಿಗತಕ್ಕ ಅಂಶದಷ್ಟೆ.

ವಿವರಣೆ: ಈ ಪ್ರಕರಣದ ಬಗ್ಯೆ ಪಾಲು ಕೇಳಿದ ತಾರೀಕೆಂಬುದು-

[a] ಪಾಲು ಕೇಳಿ ದಾವಾ ತಂದಿದ್ದರೆ. [ಅಂಥಾ ದಾವೆ ಯನ್ನು ಮುಂದರಿಸಲಿ ಯಾ ಮುಂದರಿಸದಿರಲಿ] ದಾವೆ ದಾಕ್ಲಾದ ತಾರೀಕು; ಮತ್ತು

[b] ದಾವೆಯಲ್ಲದೆ ಬೇರೆ ರೀತಿಯಿಂದ ಕೇಳಿದ್ದಲ್ಲಿ ಹಾಗೆ

ಕೇಳಿದ ತಾರೀಕು.

ಆಗಿರತಕ್ಕದ್ದು.

[3] ಪಾಲಾಗುವ ಸಮಯದಲ್ಲಿ ಪಾಲು ತೆಗೆದುಕೊಳ್ಳುವ ಒಂದು ಕವರು ನಿಸ್ಸಂತತಿ ಕವರಾಗಿದ್ದಲ್ಲಿ ಆ ಕವರು ಪಾಲು ಹೊಂದುವ ಕುಟುಂಬದಲ್ಲಿ 50 ವರ್ಷಗಳಿಗೆ ಮೀರದ ಒಂದೇಒಂದಾದರೂ ಹೆಣ್ಣು ಮೆಂಬರಳು ಇದ್ದಲ್ಲಿ ಅದು ಹೊಂದಿದ ಆಸ್ತಿಗಳಲ್ಲಿ ಇದಕ್ಕೆ ಜೀವಮಾನದ ಅನುಭೋಗದ ಹಕ್ಕು ಮಾತ್ರ ಇರತಕ್ಕದ್ದು. ಅಥವಾ ಪಾಲಿನಲ್ಲಿ ಕುಟುಂಬವು ಹಲವು ಕವರುಗಳಾಗಿ ವಿಭಾಗಿಸಲ್ಪಟ್ಟಲ್ಲಿ ಅಂಥಾ ಕವರು ಗಳ ಪೈಕಿ ಒಂದೇಒಂದು ಕವರಾದರೂ ಸಂತತಿ ಕವರಾಗಿದ್ದು ಮತ್ತು ಅಂಥಾ ಸ್ತ್ರೀ ಮೆಂಬರಳು ಅಥವಾ ಸಂತತಿ ಕವರು ಇಲ್ಲದಿದ್ದಲ್ಲಿ ಆ ಕವರಿಗೆ ಹೋದ ಆಸ್ತಿಯಲ್ಲಿ ಇಚ್ಛಾನುಸಾರವಾದ ಹಕ್ಕಿರತಕ್ಕದ್ದು.

[4] ಉಪಪ್ರಕರಣ [3] ರಲ್ಲಿ ನಮೂದಿಸಿದ ವಿಚಾರದಲ್ಲಿ ಅಂಥ ಕುಟುಂಬದ ಮೆಂಬರರ ಪೈಕಿ 50 ವರ್ಷ ಪೂರ್ತಿಯಾಗದ ಸ್ತ್ರೀಯು ಇಲ್ಲದೆ ಹೋದಲ್ಲಿ ಅಥವಾ ಅದೇ ಸಮಯದ ಯಾ ನಂತರದ ಪಾಲಿನಲ್ಲಿ ನಿಂಗಡಿಸಲ್ಪಟ್ಟು ಆದ ಕುಟುಂಬದ ಎಲ್ಲಾ ಕವರುಗಳು ನಿಸ್ಸಂತತಿ

ಕವರುಗಳಾದ್ದಲ್ಲಿ ನಿಸ್ಸಂತತಿ ಕವರಿಗೆ ಪಾಲಿನಲ್ಲಿ ಸೇರಿದ ಆಸ್ತಿಗಳ ಅನುಭೋಗದ ಹಕ್ಕೆಂಬುದು ತನ್ನಂತೆಯೇ ಇಚ್ಛಾನುಸಾರವಾಗುವುದು.

[5] ಪಾಲಿನಲ್ಲಿ ನಿಸ್ಸಂತತಿ ಕವರಿಗೆ ವಿಂಗಡಿಸಲ್ಪಟ್ಟ ಮತ್ತು ಆ ಕವರಿನ ಕೊನೆಯ ಮೆಂಬರನ ಮರಣದ ವರೆಗೆ ಅದರ ಅನುಭೋಗದಲ್ಲಿದ್ದ ಆಸ್ತಿಗಳು ಕುಟುಂಬಕ್ಕೇನೇ ಸೇರತಕ್ಕದ್ದು; ಅಥವಾ ಆ ಕುಟುಂಬವು ಅದೇ ಸಮಯದಲ್ಲಿ ಅಥವಾ ನಂತರದ ಪಾಲಿನಲ್ಲಿ ಹಲವು ಕವರುಗಳಾಗಿ ವಿಭಾಗಿಸಲ್ಪಟ್ಟದ್ದಲ್ಲಿ ಅತಿ ಸಮೀಪದ ಸಂತತಿ ಕವರು ಯಾ ಕವರುಗಳಿಗೆ ಸೇರತಕ್ಕದ್ದು.

[6] ಕುಟುಂಬದ ಎಲ್ಲಾ ಕವರುಗಳೊಳಗೆ ಅವುಗಳ ಪ್ರತ್ಯೇಕ ಮತ್ತು ಇಚ್ಛಾನುಸಾರದ ಶಾಶ್ವತ ಅನುಭೋಗಕ್ಕೆ ಕುಟುಂಬದ ಎಲ್ಲಾ ಪ್ರಾಯಸ್ಥ ಮೆಂಬರರು ಸೇರಿ ಮತ್ತು ಕುಟುಂಬದ ಎಲ್ಲಾ ಆಸ್ತಿಗಳು ವಿಭಾಗಿಸಲ್ಪಟ್ಟದ್ದರೆ ಯಾ ವಿಭಾಗಿಸುವಂತಿದ್ದರೆ ಯಾ ವಿಭಾಗಿಸುವ ಇರಾದೆಯನ್ನು ಸೂಚಿಸುವಂತಿದ್ದರೆ ಯಾ ವಿಭಾಗಿಸಿದ ರೀತಿಯಲ್ಲಿದ್ದರೆ ಅಂಥಾ ರಿಜಿಸ್ಟ್ರಿಯಾದ ಕುಟುಂಬದ ಸೆಟ್ಲ್‌ಮೆಂಟು ಪತ್ರಗಳು (ಯಾವ ಹೆಸರಿನಿಂದಲೇ ಕರೆಯಲ್ಪಡಲಿ) ಅಥವಾ ಒಂದು ಯವಾಡ್ರ್ಯ, ಅಂಥಾ ಸೆಟ್ಲ್‌ಮೆಂಟ್ ಪತ್ರಗಳಲ್ಲಿ ಯಾ ಯವಾಡ್ರ್ಯಗಳಲ್ಲಿ ಪ್ರತಿಕೂಲವಾದ ಯಾವದೇ ಶರ್ತಗಳಿದ್ದರೂ ಕುಟುಂಬದ ಆಸ್ತಿಗಳ ಪಾಲನ್ನು ವಿಭಾಗವೆಂದೇ ಪರಿಗಣಿಸಲ್ಪಡತಕ್ಕದ್ದು.

[7] ಈ ಪರಿಚ್ಛೇದದ ನಿಯಮಗಳು ಅದೊಂದು ಕುಟುಂಬವೆಂಬಂತೆ ಪ್ರತ್ಯೇಕ ಆಸ್ತಿಗಳಿರುವ ಪ್ರತಿಯೊಂದು ಕವರಿಗೂ ಅನ್ವಯಿಸತಕ್ಕದು.

ಪರಿಚ್ಛೇದ VII

ಇತರ ವಿಷಯಗಳು

38 [1] ಈ ಕಾನೂನಿಗನುಸರಿಸಿ ಅದನ್ನು ಸರಿಯಾಗಿ ಜಾರಿಗೆ ತರುವರೆ ಪ್ರಾಂತಿಕ ಸರಕಾರವು ಬೇಕಾದ ನಿಯಮಗಳನ್ನು ಮಾಡಬಹುದು.

[2] ಮುಖ್ಯವಾಗಿ ಮತ್ತು ಮೇಲಿನ ಅಧಿಕಾರಕ್ಕೆ ವ್ಯತಿರಿಕ್ತವಾಗದಂತೆ ಈ ಕಾನೂನಿಗೆ ಆಗತ್ಯವಿರುವ ಅಥವಾ ಅಗತ್ಯವೆಂದು ಕಂಡು ಬರುವ ಎಲ್ಲಾ ವಿಷಯಗಳಿಗೆ ಅಂಥಾ ನಿಯಮಗಳನ್ನು ಮಾಡುವಂಥಾದ್ದಾಗಿರುತ್ತದೆ.

[3] ಈ ಪ್ರಕರಣ ಪ್ರಕಾರ ಮಾಡತಕ್ಕ ಎಲ್ಲಾ ನಿಯಮಗಳು ಫೋರ್ಟ್ ಸೈಂಟ್ ಜೋರ್ಜ್ ಗಜೆಟಿನಲ್ಲಿ ಪ್ರಕಟಿಸಲ್ಪಡಬೇಕು. ಮತ್ತು ಅಂಥಾ ಪ್ರಕಟಣೆಯು ಈ ಕಾನೂನಿನಲ್ಲೇ ಅಪ್ರಗಳಿದ್ದರೆ ಹೇಗೋ ಹಾಗೆಯೇ ಎಂದು ಪರಿಗಣಿಸಲ್ಪಡತಕ್ಕದ್ದು.

39 ಈ ಕಾನೂನಿನಲ್ಲಿ ಸ್ಪಷ್ಟವಾಗಿ ಸಂಚರಿಸುವಷ್ಟರ ಮಟ್ಟಿನ ಹೊರತು ಅಳಿಯಸಂತಾನ ಕಾನೂನಿನ ನಿಯಮ. ಪದ್ಧತಿ ಯಾ ಕಟ್ಟು ಕಟ್ಟಳೆಗಳನ್ನು ಈ ಕಾನೂನು ಮಾರ್ಪಡಿಸುವದಿಲ್ಲ.



ನವಯುಗ ಪ್ರೆಸ್. ಉಡುಪಿ.

ತನ್ಮುಷ್ಟಕ್ಕೆ ತಾವು ಇಂಗ್ಲಿಷ್ ಕಲಿಯಲು ಅನುಕೂಲವಾದ

ದಿ| ಕೊರಡ್ಕಲ್ ಶ್ರೀನಿವಾಸರಾಯರ

ಸುಲಭದಲ್ಲಿ ಇಂಗ್ಲಿಷ್

ಎಂಬ ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0.

ಸರ್ವಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿಕೊಳ್ಳುವ

ವಿಧಾನವನ್ನು ವಿವರಿಸುವ ಡಾ| ಕೊರಡ್ಕಲ್ಲರ

ಮನೆ ಮದ್ದು

ಎಂಬ ಗೃಹವೈದ್ಯ ಬೆಲೆ ರೂ. 2-0-0

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ
ವಾರಪತ್ರಿಕೆ
ಉಡುಪಿ



ಅಂತರಂಗ
ಪುಸ್ತಕ ವಾರಪತ್ರಿಕೆ
ಉಡುಪಿ

090331